# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕರ್ನಾಟಕ ಕರಾವಳಿ ಮಂಜುಗಡ್ಡೆ ಘಟಕ ಮತ್ತು
ಶೈತ್ಯಾಗಾರಗಳು 2007-08ನೇ ಸಾಲಿನಲ್ಲಿ ಬಳಸಿದ
ವಿದ್ಯುತ್ ಮೇಲೆ ಸಹಾಯಧನ ನೀಡುವಿಕೆ.

ಓದಲಾಗಿದೆ:-
(1) ಆದೇಶ ಸಂಖ್ಯೆ: ಪಸಂಮೀ/140/ಮೀಇಯೋ/2008
ದಿನಾಂಕ:31-03-2009.
(2) ಆದೇಶ ಸಂಖ್ಯೆ: ಪಸಂಮೀ/62/ಮೀಇಯೋ/2010
ದಿನಾಂಕ:09-07-2010.
(3) ಪತ್ರ ಸಂಖ್ಯೆ: ಮಂಜುಡ್ಡೆ/2/2010-11
ದಿನಾಂಕ:28-01-2011.

******

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ 2007-08ನೇ ಸಾಲಿನಲ್ಲಿ ಮಂಜುಗಡ್ಡೆ ತಯಾರಿಕಾ ಘಟಕಗಳು ಬಳಸಿದ ಒಂದು ಯೂನಿಟ್ ವಿದ್ಯುತ್‌ಗೆ ರೂ.1.00ರಂತೆ ಪ್ರತಿ ಘಟಕಕ್ಕೆ ಗರಿಷ್ಠ ರೂ.1.50 ಲಕ್ಷಕ್ಕೆ ಸೀಮಿತಗೊಳಿಸಿ ಸಹಾಯಧನ ಮಂಜೂರು ಮಾಡಿ ರೂ.190.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ ಮಂಜುಗಡ್ಡೆ ತಯಾರಿಕಾ ಘಟಕಗಳಿಗೆ ಪ್ರತೀ ಯೂನಿಟ್ ವಿದ್ಯುತ್‌ಗೆ ನೀಡುತ್ತಿರುವ ರೂ.1.00ರ ಸಹಾಯಧನವನ್ನು ಮುಂದುವರೆಸಲಾಗುವುದೆಂದು ಮಾನ್ಯ ಮುಖ್ಯಮಂತ್ರಿಗಳು 2010-11ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದ ಮೇರೆಗೆ ಈ ಯೋಜನೆಯನ್ನು ಸದರಿ ಸಾಲಿಗೂ ಮುಂದುವರಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ, ಅನುದಾನದ ಕೊರತೆಯಿಂದಾಗಿ ಪ್ರತೀ ಘಟಕಕ್ಕೆ ರೂ.1.50 ಲಕ್ಷಗಳ ಬದಲಿಗೆ ಸಹಾಯಧನವನ್ನು ಗರಿಷ್ಠ ರೂ.1.40 ಲಕ್ಷಕ್ಕೆ ಸೀಮಿತಗೊಳಿಸಿ ವಿತರಿಸಿರುತ್ತಾರೆ. ವಿದ್ಯುತ್ ಯೂನಿಟ್‌ಗಳ ಪಟ್ಟಿಯಲ್ಲಿ ಕಣ್ತಪ್ಪಿನಿಂದ ಬಿಟ್ಟು ಹೋಗಿರುವ 28 ಮಂಜುಗಡ್ಡೆ ತಯಾರಿಕಾ ಘಟಕಗಳು ಬಳಸಿರುವ ವಿದ್ಯುತ್‌ಗೆ ಸಹಾಯಧನವಾಗಿ ರೂ.32,53,610-00ಗಳನ್ನು ನೀಡಬೇಕಾಗಿದ್ದು, ಆ ಅನುದಾನವನ್ನು ಪುನರ್ವಿನಿಯೋಗದ ಮೂಲಕ ಭರಿಸಲು ಮೀನುಗಾರಿಕೆ ನಿರ್ದೇಶಕರು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆ:ಪಸಂಮೀ 18 ಮೀಇಯೋ 2011, ಬೆಂಗಳೂರು ದಿನಾಂಕ:29-01-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, 2007-08ನೇ ಸಾಲಿನಲ್ಲಿ 28 ಮಂಜುಗಡ್ಡೆ ತಯಾರಿಕಾ ಘಟಕಗಳು ಬಳಸಿದ ಒಂದು ಯೂನಿಟ್ ವಿದ್ಯುತ್‌ಗೆ ರೂ.1.00 ರಂತೆ ಸಹಾಯಧನ ಪ್ರತೀ ಘಟಕಕ್ಕೆ ಗರಿಷ್ಠ ರೂ.1.40 ಲಕ್ಷಕ್ಕೆ ಸೀಮಿತಗೊಳಿಸಿ ರೂ.32,53,610-00 (ಮೂವತ್ತೆರಡು ಲಕ್ಷದ ಐವತ್ತಮೂರು ಸಾವಿರದ ಆರುನೂರ ಹತ್ತು ರೂಪಾಯಿಗಳು ಮಾತ್ರ)ಗಳನ್ನು ಈ ಆದೇಶದ ಅನುಬಂಧ-1ರಲ್ಲಿ ನಮೂದಿಸಿರುವ 28 ಮಂಜುಗಡ್ಡೆ ಘಟಕಗಳಿಗೆ ಪಾವತಿಸಲು ಅನುವಾಗುವಂತೆ ಬಿಡುಗಡೆಗೊಳಿಸಲಾಗಿದೆ.

2010-11ನೇ ಸಾಲಿನ ಲೆಕ್ಕ ಶೀರ್ಷಿಕೆ '2405-ಮೀನುಗಾರಿಕೆ-00-800-ಇತರೆ ವೆಚ್ಚ-0-20-ಮತ್ಸ್ಯಾಶ್ರಯ-ಉಪಶೀರ್ಷಿಕೆ-059-ಇತರೆ ಖರ್ಚು (ಯೋಜನೆ)'ಯಡಿ ಉಳಿತಾಯವಾಗುವ ರೂ.35.41 ಲಕ್ಷಗಳ ಪೈಕಿ ಈ ವೆಚ್ಚವನ್ನು ಅಂದರೆ ರೂ.32,53,610-00 ಗಳನ್ನು ಲೆಕ್ಕ ಶೀರ್ಷಿಕೆ '2405-ಮೀನುಗಾರಿಕೆ-00-800-ಇತರೆ ವೆಚ್ಚ-0-27-ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುಚ್ಛಕ್ತಿ-106 ಸಹಾಯಧನ (ಯೋಜನೆ)'ಕ್ಕೆ ಪುನರ್‌ವಿನಿಯೋಗ ಮಾಡಿ ಈ ಆದೇಶದ ಅನುಬಂಧ-2ರಲ್ಲಿ ನಮೂದಿಸಿರುವಂತೆ ಭರಿಸತಕ್ಕದ್ದು.

ಸದರಿ ಮೊತ್ತವನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರು ಪೇಯೀಸ್ ರಸೀದಿ ಮೂಲಕ ರಾಜ್ಯ ಹುಜೂರ್ ಖಜಾನೆ, ಬೆಂಗಳೂರು ಇವರಿಂದ ಸೆಳೆದು 28 ಮಂಜುಗಡ್ಡೆ ಘಟಕ ಮತ್ತು ಶೈತ್ಯಾಗಾರಗಳಿಗೆ ಪಾವತಿಸಲು ಅನುಮತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಆದೇಶ ಸಂಖ್ಯೆ:ಎಫ್‌ಡಿ/11/ಟಿಎಫ್‌ಪಿ/2007 ದಿನಾಂಕ:27-11-2007ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಎಂ.ರಾಜಣ್ಣ) 29/1
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
4) ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4).
6) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7) ಶಾಖಾ ರಕ್ಷಾ ಕಡತ:ಹೆಚ್ಚಿನ ಪ್ರತಿಗಳು.